# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಫೋನ್‌ನಂ: 0821 – 2417106
ಫ್ಯಾಕ್ಸ್ ನಂ: 0821 – 2417105
e-mail:fa@cescmysore.org
CIN:U40109KA2004SGCO35177

ನಿಗಮ ಕಾರ್ಯಾಲಯ,
ನಂ.29, ವಿಜಯ ನಗರ 2ನೇ ಹಂತ,
ಹಿನಕಲ್, ಮೈಸೂರು.570017.

ಕ್ರಮಾಂಕ:ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/ಹಿಸ(ತೆ)18-19/ cys-1381 ದಿನಾಂಕ: 04 JAN 2019
ಲಗತ್ತು: 2ಪುಟಗಳು.

## ಸುತ್ತೋಲೆ

**ವಿಷಯ:**– ತೇವಣಿ ವಂತಿಗೆ ಕಾಮಗಾರಿಗಳಿಗೆ ಸರಕು ಮತ್ತು ಸೇವಾ ತೆರಿಗೆ ವಿಧಿಸುವ ಬಗ್ಗೆ.

**ಉಲ್ಲೇಖ:**–1).ನಡಾವಳಿ ಕ್ರ.ಸಂ: ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/ಹಿಸ(ತೆ)/18-19/ 13896/ ದಿನಾಂಕ.23.10.2018

2).Proceeding No: CFO/GM/DGM(Tax)/AGM(Tax)/SA(Tax)/ 18-19/13897/Dated.23.10.2018.

3).ಮಾನ್ಯ ವ್ಯವಸ್ಥಾಪಕರ ಅನುಮೋದಿತ ಟಿಪ್ಪಣಿ ಸಂಖ್ಯೆ: 72/ದಿನಾಂಕ. 18.12.2018

***********

ನಿಗಮದ ವ್ಯಾಪ್ತಿಯಲ್ಲಿ ಗ್ರಾಹಕರ ಕೋರಿಕೆಯ ಮೇರೆಗೆ ಹಾಗೂ ಕೆ.ಇ.ಆರ್.ಸಿ ನಿರ್ದೇಶನದ ಮೇರೆಗೆ ತೇವಣಿ ವಂತಿಗೆ ಕಾಮಗಾರಿ ಸಂಬಂಧ ಅಂದಾಜು ಪಟ್ಟಿ ಮೊತ್ತವನ್ನು ಸಂಗ್ರಹಿಸಿ (ತೆರಿಗೆಯು ಸೇರಿದಂತೆ) ನಿಗಮದ ವತಿಯಿಂದ ಕಾಮಗಾರಿ ಕೈಗೊಳ್ಳುವ ಪದ್ಧತಿ ಜಾರಿಯಲ್ಲಿರುತ್ತದೆ. ಆದರೆ ದಿನಾಂಕ 01.07.2017ರಿಂದ ಜಿ.ಎಸ್.ಟಿ ಕಾಯ್ದೆಯು ಜಾರಿಗೆ ಬಂದ ಹಿನ್ನಲೆಯಲ್ಲಿ ತೇವಣಿ ವಂತಿಗೆ ಕಾಮಗಾರಿಯನ್ನು ಸೇವೆಯೆಂದು ಪರಿಗಣಿಸಿ ಗ್ರಾಹಕರಿಂದ ಸಂಗ್ರಹಿಸಿದ ತೇವಣಿ ವಂತಿಗೆ ಕಾಮಗಾರಿ ಅಂದಾಜುಪಟ್ಟಿಯ ಮೊತ್ತಕ್ಕೆ ಜಿ.ಎಸ್.ಟಿ ಅನ್ವಯವಾಗುತ್ತದೆ ಎಂದು ತೆರಿಗೆ ಸಲಹೆಗಾರರು ಸಲಹೆ ಮತ್ತು ಅಭಿಪ್ರಾಯವನ್ನು ನೀಡಿರುತ್ತಾರೆ. ಆದರೂ ಈ ಸಂಬಂಧ ಸಮಿತಿಯನ್ನು ರಚಿಸಿ ದಿನಾಂಕ 24.08.2018 ಮತ್ತು 17.09.2018ರಂದು ತೆರಿಗೆ ಸಲಹೆಗಾರರು ಒಳಗೊಂಡಂತೆ ಸಮಿತಿಯ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ ಸಮಿತಿಯ ಅಧ್ಯಕ್ಷರು ತೆಗೆದುಕೊಂಡ ತೀರ್ಮಾನದಂತೆ ಕ್ರಮ ಕೈಗೊಳ್ಳಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದನೆ ಪಡೆಯಲಾಗಿದೆ.

ಆದ್ದರಿಂದ ತೇವಣಿ ವಂತಿಗೆ ಕಾಮಗಾರಿಯು ಜಿ.ಎಸ್.ಟಿ ವ್ಯಾಪ್ತಿಗೆ ಒಳಪಡುವುದರಿಂದ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.

A) ಅಂದಾಜು ಪಟ್ಟಿಯಲ್ಲಿ ನಮೂದಿಸಿದ ಒಟ್ಟು ಮೊತ್ತದಲ್ಲಿ ಮೂಲ ಬೆಲೆ ಮತ್ತು ತೆರಿಗೆಯನ್ನು (Basic Price and GST) ಕೆಳಕಂಡಂತೆ ಬೇರ್ಪಡಿಸಿ ಸೂಚನೆ ಪತ್ರವನ್ನು ನೀಡುವುದು.

ಪು.ತಿ.ನೋ.

| Sl No | Components of estimate | Basic Price | Applicable of GST (Rs) |
|---|---|---|---|
| 1 | Material Cost | XXXX | XXXX |
| 2 | Labour Charges | XXXX | XXXX |
| 3 | Overhead Cost | XXXX | XXXXX |
| | Total Value | XXXXXX | XXXXXXX |

B) ಅಂದಾಜು ಪಟ್ಟಿಯ ಮೊತ್ತದ ಮೇಲೆ ಶೇ.10 ರಷ್ಟು ಮೇಲ್ವಿಚಾರಣ ಶುಲ್ಕ ಮತ್ತು ಮೇಲ್ವಿಚಾರಣ ಶುಲ್ಕದ ಮೇಲೆ ಶೇ.18 ರಷ್ಟು ಜಿ.ಎಸ್.ಟಿಯನ್ನು ಸಂಗ್ರಹಿಸುತ್ತಿರುವುದು ಕ್ರಮಬದ್ಧವಾಗಿದೆ.

C) ಈ ಹಿಂದೆ ಅಂದಾಜು ಪಟ್ಟಿಯ ಒಟ್ಟು ಮೊತ್ತವನ್ನು ಪಾವತಿಸಿಕೊಂಡಿದ್ದಲ್ಲಿ, ಆ ಮೊತ್ತದಲ್ಲಿ ತೆರಿಗೆಯನ್ನು ಬೇರ್ಪಡಿಸಿ ಸರ್ಕಾರಕ್ಕೆ ಕೂಡಲೇ ಪಾವತಿಸಲು ಕ್ರಮ ಕೈಗೊಳ್ಳುವುದು. ಈ ಸಂಬಂಧ ಈಗಾಗಲೇ ಸೂಚನ ಪತ್ರ ನೀಡಿರುವ ಕಛೇರಿಯು ಸಂಗ್ರಹಿಸಿದ ಅಂದಾಜು ಪಟ್ಟಿಯ ಮೊತ್ತದಲ್ಲಿ ತೆರಿಗೆಯನ್ನು ಬೇರ್ಪಡಿಸಿ ಅಧಿಕೃತ ಜ್ಞಾಪನ ಪತ್ರ ಹೊರಡಿಸುವುದು. ಈ ಅಧಿಕೃತ ಜ್ಞಾಪನ ಪತ್ರದ ಆಧಾರದ ಮೇಲೆ ವಿಭಾಗ ಮಟ್ಟದಲ್ಲಿ ಜೆ.ವಿ ಮೂಲಕ ಹೊಂದಾಣಿಕೆ ಮಾಡಿಕೊಂಡು ಜಿ.ಎಸ್.ಟಿ ಪೋರ್ಟಲ್‌ನಲ್ಲೇ ಅಪ್ಲೋಡ್ ಮಾಡುವುದು.

D) ಠೇವಣಿ ವಂತಿಗೆ ಕಾಮಗಾರಿಗೆ ಸಂಬಂಧಿಸಿದಂತೆ Input Credit ಪಡೆಯತಕ್ಕದ್ದು.

F) ತೆರಿಗೆ ಸಲಹೆಗಾರರ ಅಭಿಪ್ರಾಯದಂತೆ ಹೂಡುವಳಿ ತೆರಿಗೆ (Input Tax Credit) ಪಡೆಯಲು ಈ ಕೆಳಕಂಡ ದಾಖಲಾತಿಗಳನ್ನು ವಿಭಾಗ ಮಟ್ಟದಲ್ಲಿ ನಿರ್ವಹಿಸಿ ದಾಖಲಾತಿಯನ್ನು ನಿಗಮ ಕಛೇರಿಗೆ ತಪ್ಪದೇ ಸಲ್ಲಿಸುವುದು.

a) ಠೇವಣಿ ವಂತಿಗೆ ಕಾಮಗಾರಿಗೆ ಸಂಬಂಧಿಸಿದಂತೆ ಉಪಯೋಗಿಸುವ ಸಾಮಾಗ್ರಿಗಳಾದ ಪರಿವರ್ತಕಗಳು/ಕಂಬಗಳು ಇತ್ಯಾದಿಗಳನ್ನು ಪ್ರತ್ಯೇಕವಾಗಿ ಖರೀದಿ ಆದೇಶ/ ಲೇಬರ್ ಅವಾರ್ಡ್/ ವರ್ಕ್ ಅವಾರ್ಡ್ ಹೊರಡಿಸಿ, ಖರೀದಿಸಬೇಕು ಹಾಗೂ ಅವುಗಳನ್ನು ಪ್ರತ್ಯೇಕವಾಗಿ ಲೆಕ್ಕೀಕರಿಸಬೇಕು. ಠೇವಣಿ ವಂತಿಗೆ ಕಾಮಗಾರಿಗೆ ಖರೀದಿಸುವ ಸಾಮಾಗ್ರಿಗಳನ್ನು ಬೇರೆ ಯಾವುದೇ ಇತರೆ ಕೆಲಸಕ್ಕೆ ಬಳಸಬಾರದು. ಈ ಠೇವಣಿ ವಂತಿಗೆ ಕಾಮಗಾರಿಗೆ ಖರೀದಿಸಿದ ಸಾಮಾಗ್ರಿಗಳನ್ನು ಸದರಿ ಕಾಮಗಾರಿಗಳಿಗೆ ಮಾತ್ರ ಬಳಸತಕ್ಕದ್ದು.

b) ಸೇವಾ ಪೂರೈಕೆದಾರರು ಪೂರೈಸಿದ ಸಾಮಾಗ್ರಿಗಳಿಗೆ ಸಂಬಂಧಿಸಿದ ಹುಂಡಿಯ ವಿವರಗಳನ್ನು ಅವರ ಜಿ.ಎಸ್.ಟಿ.ಆರ್-1 ನಮೂನೆಯಲ್ಲಿ ಅಪ್ಲೋಡ್ ಮಾಡಬೇಕಾಗಿರುತ್ತದೆ, ಹಾಗೂ ಅದು ಪಾವಿಸನಿನಿಯ ಜಿ.ಎಸ್.ಟಿ.ಆರ್-2ಎನಲ್ಲಿ ಪ್ರಕಟಗೊಳ್ಳಬೇಕಾಗಿರುತ್ತದೆ. ತಪ್ಪಿದಲ್ಲಿ ಸೇವಾ ಪೂರೈಕೆದಾರರು ಜಿ.ಎಸ್.ಟಿ.ಆರ್-1ರಲ್ಲಿ ಹುಂಡಿಯ ವಿವರಗಳನ್ನು ನಮೂದಿಸುವವರೆಗೂ ಸದರಿ ಹುಂಡಿಯನ್ನು ಪಾವತಿಸತಕ್ಕದ್ದಲ್ಲ.

c) ಹುಂಡಿವಾರು/Invoice wise Details ನ್ನು ನಿರ್ವಹಿಸಬೇಕಾಗಿರುತ್ತದೆ.

d) ಪ್ರತ್ಯೇಕವಾಗಿ ಖಾತಾ ಪುಸ್ತಕ/ ಲೆಕ್ಕ ನಿರ್ವಹಣೆಯನ್ನು ಮಾಡಬೇಕಾಗಿರುತ್ತದೆ.

e) ಪ್ರತ್ಯೇಕವಾದ ಲೆಕ್ಕ ಶೀರ್ಷಿಕೆಯನ್ನು ನಿರ್ವಹಣೆ ಮಾಡುವುದು. ಈ ಸಂಬಂಧ ಷೆಡ್ಯೂಲ್ ನಿರ್ವಹಣೆ ಮಾಡುವ ವಿಷಯ ನಿರ್ವಾಹಕರು ಸದರಿ ಕಾಮಗಾರಿಗೆ ಸಂಬಂಧಸಿದಂತೆ ಪೂರ್ಣ ದಾಖಲಾತಿಗಳನ್ನು ನಿರ್ವಹಣೆ ಮಾಡತಕ್ಕದ್ದು. ಪೂರ್ಣ ದಾಖಲಾತಿಗಳನ್ನು ತಿಂಗಳ ಅಂತ್ಯದಲ್ಲಿ ನಿಗಮ ಕಛೇರಿಗೆ ಅನುಬಂಧ-1 ಹಾಗೂ 2ರಲ್ಲಿ ಲಗತ್ತಿಸಿರುವ ಮಾಹಿತಿಯು ತಲುಪುವಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸುವುದು.

ಪು.ತಿ.ನೋ.

ಸೇವಾ ಪೂರೈಕೆದಾರರಿಗೆ ಆರು ತಿಂಗಳುಗಳಿಗೆ ಹುಂಡಿಯ ಮೊತ್ತವನ್ನು ಪಾವತಿಸುವ ನಿಬಂಧನೆಗೆ ಒಳಪಟ್ಟಿರುತ್ತದೆ. ತಪ್ಪಿದಲ್ಲಿ ಪಡೆದಿರುವ Input Tax Credit ಜಿ.ಎಸ್.ಟಿ ಪ್ರಾಧಿಕಾರಕ್ಕೆ ಹಿಂದಿರುಗಿಸಬೇಕಾಗಿರುತ್ತದೆ ಹಾಗೂ ಹಿಂದಿರುಗಿಸಿದ ಮೊತ್ತಕ್ಕೆ ಶೇ.24 ಬಡ್ಡಿಯನ್ನು ಸಹ ಭರಿಸಬೇಕಾಗುತ್ತದೆ.

g) ಲೆಕ್ಕಘಟಕಗಳು ಠೇವಣಿ ವಂತಿಗೆ ಕಾಮಗಾರಿಗಳಿಗೆ Input Tax Credit ಪಡೆದಲ್ಲಿ ಕೇಂದ್ರೀಯ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಸೆಕ್ಷನ್ 16(3)ರನ್ವಯ ಆದಾಯ ತೆರಿಗೆ ಕಾಯ್ದೆ 1961ರಡಿಯಲ್ಲಿ ಯಾವುದೇ ಸವಕಳಿಯನ್ನು ಪಡೆಯಲು ಅವಕಾಶವಿರುವುದಿಲ್ಲ.

h) ಒಳ ಪೂರೈಕೆಗೆ ಸಂಬಂಧಿಸಿದಂತೆ ಸರಬರಾಜುದಾರರು Tax Invoice ನಲ್ಲಿ ತೋರಿಸಿರುವ ಪೂರ್ಣ ಮಾಹಿತಿಯನ್ನು ನಿಗಧಿತ ನಮೂನೆಯಲ್ಲಿ ಅಪ್‌ಲೋಡ್ ಮಾಡಿರುವ ಬಗ್ಗೆ ಖಾತರಿಪಡಿಸಿಕೊಂಡು ಹುಂಡಿಗಳ ಮೊತ್ತವನ್ನು ಪಾವತಿಸಲು ವಿಭಾಗ ಮಟ್ಟದಲ್ಲಿ ಕ್ರಮ ಕೈಗೊಳ್ಳುವುದು.

ಮುಖ್ಯ ಆರ್ಥಿಕ ಅಧಿಕಾರಿ.

**ಪ್ರತಿಗಳು:–**

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ,ನಿಗಮ ಕಛೇರಿ ಮೈಸೂರು,ರವರ ಮಾಹಿತಿಗಾಗಿ.
- ಮುಖ್ಯ ಇಂಜಿನಿಯರ್ (ವಿ) ಕಾ ಮತ್ತು ಪಾ, ವಲಯ ಕಛೇರಿ, ಚಾವಿಸನಿನಿ, ಮೈಸೂರು.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ),ಕಾ ಮತ್ತು ಪಾ ವೃತ್ತ ಕಛೇರಿಗಳು, ಚಾವಿಸನಿನಿ.
- ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು ಕಾ ಮತ್ತು ಪಾ ವೃತ್ತ ಕಛೇರಿಗಳು, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು(ಲೆಕ್ಕ ಮತ್ತು ಕಂ), ಚಾವಿಸನಿನಿ, ನಿಗಮ ಕಛೇರಿ, ಮೈಸೂರು.
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್) ನಿಗಮದ ಅಧಿಕೃತ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.
- ಆಪ್ತ ಕಾರ್ಯದರ್ಶಿ, ವ್ಯನಿ/ನಿ(ತಾಂ)/ಮುಆಅ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ, ಚಾವಿಸನಿನಿ– ತಮ್ಮ ಅಧೀನ ಕಛೇರಿಗಳಿಗೆ ಸದರಿ ಸುತ್ತೋಲೆಯನ್ನು ರವಾನಿಸತಕ್ಕದ್ದು.
- ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನೆ, ವಿಭಾಗಗಳು, ಚಾವಿಸನಿನಿ.
- ಎಲ್ಲಾ ಲೆಕ್ಕಾಧಿಕಾರಿಗಳು (ಆಂ ಪ) ಕಾ ಮತ್ತು ಪಾ, ವಿಭಾಗಗಳು/ವೃತ್ತಗಳು/ಚಾವಿಸನಿನಿ.
- ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಂ ನಿ) ನಿಗಮ ಕಛೇರಿ, ಚಾವಿಸನಿನಿ. ಮೈಸೂರು.
- ಮು.ಕ.

**Chamudeshwari Electricity Supply Corporation Limited, Mysore**

**Statement Showing the purchase of Goods Exclusively used for DCW work for the month of:**

**Annexure-1**

| Sl No | ICRA No | ICRA Date | Name of the Supplier | Place | GST No | Description of the Material | HSN Code | P.O Reference | Qty | Invoice No | Net Purchase Before Tax | CGST% | CGST Amount | SGST% | SGST Amount | IGST% | IGST Amount | Other Charges | Toatal Bill Amount | Payment Details |
|---|---|---|---|---|---|---|---|---|---|---|---|---|---|---|---|---|---|---|---|---|
| 1 | | | | | | | | | | | | | | | | | | | | |
| 2 | | | | | | | | | | | | | | | | | | | | |
| 3 | | | | | | | | | | | | | | | | | | | | |
| 4 | | | | | | | | | | | | | | | | | | | | |
| 5 | | | | | | | | | | | | | | | | | | | | |
| 6 | | | | | | | | | | | | | | | | | | | | |
| 7 | | | | | | | | | | | | | | | | | | | | |
| 8 | | | | | | | | | | | | | | | | | | | | |
| 9 | | | | | | | | | | | | | | | | | | | | |
| 10 | | | | | | | | | | | | | | | | | | | | |
| 11 | | | | | | | | | | | | | | | | | | | | |
| 12 | | | | | | | | | | | | | | | | | | | | |
| 13 | | | | | | | | | | | | | | | | | | | | |

## Chamudeshwari Electricity Supply Corporation Limited, Mysore

### Statement Showing the purchase of Services Exclusively used for DCW work for the month of:

**Annexure-2**

| Sl No | ICRA No | ICRA Date | Name of the Supplier | Place | GST No | Description of the Service | SAC Code | P.O Reference | Qty | Invoice No | Invoice Date | Nett Purchase Before Tax | CGST% | CGST Amount | SGST% | SGST Amount | IGST% | IGST Amount | Other Charges | Toatal Bill Amount | Payment Details |
|---|---|---|---|---|---|---|---|---|---|---|---|---|---|---|---|---|---|---|---|---|---|
| 1 | | | | | | | | | | | | | | | | | | | | | |
| 2 | | | | | | | | | | | | | | | | | | | | | |
| 3 | | | | | | | | | | | | | | | | | | | | | |
| 4 | | | | | | | | | | | | | | | | | | | | | |
| 5 | | | | | | | | | | | | | | | | | | | | | |
| 6 | | | | | | | | | | | | | | | | | | | | | |
| 7 | | | | | | | | | | | | | | | | | | | | | |
| 8 | | | | | | | | | | | | | | | | | | | | | |
| 9 | | | | | | | | | | | | | | | | | | | | | |
| 10 | | | | | | | | | | | | | | | | | | | | | |
| 11 | | | | | | | | | | | | | | | | | | | | | |
| 12 | | | | | | | | | | | | | | | | | | | | | |
| 13 | | | | | | | | | | | | | | | | | | | | | |